

ಈ ಹಕ್ಕಿಗಳು ಕನ್ನಡ ನಾಡಿನ ಬಯಲು ಸೀಮೆಯಲ್ಲೂ ಕಾಣಸಿಗುವ ಹಕ್ಕಿಯಾದ್ದರಿಂದ ಇವನ್ನು ನೋಡಲು ಕಾಡಿಗೇ ಹೋಗಬೇಕೆಂದಿಲ್ಲ. ತೋಟಗಳಲ್ಲಿ, ಹಣ್ಣು, ಹೂವಿನ ಮರಗಳಲ್ಲಿ ಹೆಚ್ಚಾಗಿ ಕಾಣಸುತ್ತವೆ.

★ಚಿತ್ರ- ಲೇಖನ:
ಪುಟ್ಟರಾಜು ಕೈಗಾ

# ಕುಟುರ ಹಕ್ಕಿಗಳ ಕಲರವ



ಪಕ್ಷಿ ವೀಕ್ಷಣೆಯ ಹವ್ಯಾಸ, ಮನಸ್ಸಿಗೆ ಆಹ್ಲಾದಕರವೂ, ದೇಹಕ್ಕೆ ವ್ಯಾಯಾಮವೂ ಹೌದು. ಜತೆಗೆ ಸಮಾಜಕ್ಕೆ ಉಪಯುಕ್ತವೂ, ಅನೇಕ ವಿಜ್ಞಾನ ಸಂಶೋಧನೆಗಳಿಗೂ ಅಡಿಪಾಯವೂ ಆಗಿದೆ. ಹಾಗೆಂದೇ ಪಕ್ಷಿ ವೀಕ್ಷಣೆಯನ್ನು ಒಂದು ಪರಿಪೂರ್ಣ ಹವ್ಯಾಸ ಎಂದು ಕರೆಯುತ್ತೇವೆ. ವಿವಿಧ ಪ್ರದೇಶದಲ್ಲಿ ವಾಸಿಸುವ ಪಕ್ಷಿಗಳ ಜೀವನ ಚರಿತ್ರೆಯನ್ನು ತಿಳಿದು, ಅವು ಇತರ ಜೀವಿಗಳೊಡನೆ ಹೊಂದಿರುವ ನಿಕಟ ಸಂಬಂಧವನ್ನು ಅರಿಯುವುದು ಪಕ್ಷಿ ವೀಕ್ಷಣೆಯ ಒಂದು ಉದ್ದೇಶ. ಈ ಕಾರ್ಯಕ್ಕೆ ಹೆಚ್ಚಿನ ತಾಳ್ಮೆ ಮತ್ತು ಸಾಧನೆ ಅಗತ್ಯ.

ಮಲೆನಾಡಿನ ಕಾಡುಗಳಲ್ಲೆಲ್ಲ ದಿನಪೂರ್ತಿ ಕೇಳುವ ಸುಪರಿಚಿತ ಧ್ವನಿಯ ಹಕ್ಕಿಗಳೆಂದರೆ ಕುಟುರಗಳು. ಇದು ಕನ್ನಡ ನಾಡಿನ ಪ್ರಧಾನ ಪಕ್ಷಿ ಸಂಕುಲ. ಇವು ಇಲ್ಲದ ಕಾಡುಗಳಿಲ್ಲ. ಬಹುಶಃ ಕುಟುರಗಳ ಕೂಗು ಕೇಳದ ಕನ್ನಡಿಗನೂ ಇಲ್ಲವೆಂದೇ ಹೇಳಬಹುದು. ಬಹಳ ಸುಪರಿಚಿತವಾದ ಕುಟ್ರೂ.... ಕುಟ್ರೂ.. ಕೂಗು ಈ ಕುಟ್ರ ಹಕ್ಕಿಗಳದ್ದು.

ಈ ಹಕ್ಕಿಗಳು ಕನ್ನಡ ನಾಡಿನ ಬಯಲು ಸೀಮೆಯಲ್ಲೂ ಕಾಣಸಿಗುವ ಹಕ್ಕಿಯಾದ್ದರಿಂದ ಇವನ್ನು ನೋಡಲು ಕಾಡಿಗೇ ಹೋಗಬೇಕೆಂದಿಲ್ಲ. ತೋಟಗಳಲ್ಲಿ, ಹಣ್ಣು, ಹೂವಿನ ಮರಗಳಲ್ಲಿ ಹೆಚ್ಚಾಗಿ ಕಾಣಸುತ್ತವೆ.

ಕುಟುರ ಹಕ್ಕಿಗಳ ಜತೆಗೆ ನನ್ನದು ಬಾಲ್ಯದ ಸಂಬಂಧ. ಸುಮಾರು 1970 ರಿಂದ1982 ರವರೆಗೆ ಬೆಂಗಳೂರು ವಿಶ್ವ ವಿದ್ಯಾನಿಲಯದ ಬಸ್ ಸ್ಟಾಪ್‌ನಲ್ಲಿ ಇಳಿದು, ಸಿವಿಲ್ ಎಂಜಿನಿಯರಿಂಗ್ ಕಟ್ಟಡದ ಹಿಂಬದಿಯಿಂದ 4 ಕಿ.ಮೀ ದೂರದ ನನ್ನ ಊರಾದ ಸೊಣ್ಣೇನಹಳ್ಳಿಗೆ ಕಾಲು ರಸ್ತೆಯಲ್ಲಿ ದಟ್ಟವಾದ ಕಾಡಿನ ಮುಖಾಂತರ ನನ್ನ ತಂದೆಯವರೊಂದಿಗೆ ಹೋಗುವಾಗ ಕುಟುರದ ಕೂಗು ಕೇಳಿ ಅಚ್ಚರಿಯಾಗುತ್ತಿತ್ತು. ಆಗೆಲ್ಲ ಹಳ್ಳಿಗಳಲ್ಲಿ, ಮೊಲ, ಕವುಜಗ/ ಗೌಜಲಕ್ಕಿ, ಪಾರಿವಾಳ, ಚಿಟ್ಟುಕೋಳಿಯ